ಗಿಣಿ ಕೂತಿರುವ ಕಡೆಗೆ ಕಲ್ಲು ಎಸೆಯುತ್ತಿದ್ದ. ಕುಳ್ಳಿ ಆ ಜಾಗಕ್ಕೆ ಓಡಿಹೋಗಿ ಬೊಗಳಿ ಗಿಣಿ ಓಡಿಸಿ ಮತ್ತೆ ಬಂದು ಪಕ್ಕದಲ್ಲಿ ಕೂರುತ್ತಿತ್ತು.

ನಾಟಿ ನಾಯಿಯಾದರೂ 'ಕುಳ್ಳಿ' ಬಹಳ ಬುದ್ದಿವಂತೆ. ಗಿಣಿ, ಕಾಗೆ ಹಕ್ಕಿ ಪಕ್ಷಿಗಳು ಯಾವುದೇ ಮೂಲೆಯಲ್ಲಿ ಕುಳಿತರೂ ಅವಸರ ಪಟ್ಟು ಗಿಡಗಳ ಮಧ್ಯೆ ನುಗ್ಗಿ ಹೂವು- ಕಾಯಿಗಳನ್ನು ಉದುರಿಸುತ್ತಿರಲಿಲ್ಲ. ಪ್ರತಿ ಪಾತಿಗೂ ನೀರು ಹಾಯಿಸಲು ಅನುಕೂಲವಾಗುವಂತೆ ತೋಟದ ಮಧ್ಯೆ ಅಡ್ಡಕ್ಕೊಂದು ಉದ್ದಕ್ಕೊಂದು ಮಾಡಿದ್ದ ಕಾಲುವೆಗಳ ಬದಿಯಲ್ಲೇ ಓಡಿ ಹೋಗಿ ಬೊಗಳಿ ಪಕ್ಷಿಗಳನ್ನು ಓಡಿಸುವ ರೂಢಿ ಮಾಡಿಕೊಂಡಿತ್ತು. ಆದರೆ ಪಕ್ಷಿಗಳ ಉಪಟಳ ಕಡಿಮೆ ಆಯಿತೆಂದು ಮಾಟಣ್ಣ ಪಕ್ಕದ ತೋಟದ ಸೇಂದಿ ಅಡಸಾಲೆ ಕಡೆ ಹೊರಟನೆಂದರೆ ಕುಳ್ಳಿಯೂ ಅವನನ್ನು ಹಿಂಬಾಲಿಸಿ ಹೋಗುತ್ತಿತ್ತು. ಮತ್ತೆ ಅವನೊಂದಿಗೇ ಹಿಂದಿರುಗಿ ಬಂದು ಮೆಣಸಿನ ತೋಟದ ಮಧ್ಯೆ ಬೆದರು ಬೊಂಬೆಯ ಬುಡದಲಿ ತನ್ನ ಯಜಮಾನನ ಬಳಿ ಕುಳಿತುಕೊಳ್ಳುತ್ತಿತ್ತು.

ಮೆಣಸಿನ ತೋಟದಲ್ಲಿ ಗಿಡಗಳು ಫಸಲಿನಿಂದ ತುಂಬಿ ತುಳುಕುತ್ತಿದ್ದವು. ಹೂವು- ಹೀಚುಗಳ ಜತೆಗೆ ಮೊದ ಮೊದಲು ಬಿಟ್ಟಿದ್ದ ಕಾಯಿಗಳು ಬಲಿತು ಕೊಯ್ಲಿಗೆ ಸಿದ್ಧವಾಗಿದ್ದವು. ಮೊದಲ ಕೊಯ್ಲಿಯಲ್ಲಿ ಏನಿಲ್ಲವೆಂದರೂ ಎಂಟು ಹತ್ತು ಚೀಲ ಕಾಯಿ ಸಿಕ್ಕಬಹುದೆಂದು ಸೊಸೆ ಅಂದಾಜು ಮಾಡಿದ್ದಳು.

ಅವತ್ತು ಅಡಸಾಲೆಯ ಬಳಿ ಹೋದಾಗ ಗೆಳೆಯರೆಲ್ಲಾ ಬಹಳ ಸಂಭ್ರಮದಲ್ಲಿದ್ದರು. ಮಾರನೆಯ ದಿನ ಬೆಳಗ್ಗೆ ಕಾಡು ಹಬ್ಬ ಮಾಡುವುದರ ಬಗ್ಗೆ ಚರ್ಚೆ ನಡೆದಿತ್ತು.

ಎಲ್ಲರೂ ದುಡ್ಡು ಹಾಕಿ ಕೋಳಿ ಹುಂಜವೊಂದನ್ನು ತಂದು ಕುಯ್ದು ಅಲ್ಲಿಯೇ ಅಡುಗೆ ಮಾಡಿ ಹಬ್ಬ ಮಾಡುವುದೆಂದು ಇತ್ಯರ್ಥವಾಯಿತು. 'ಮಾಟಣ್ಣ ನಾಳೆ ಹೊತಾರೆಲೆ ಒಂದೆರಡು ರೊಟ್ಟಿ ಕಟ್ಗಂಡು ಬಂದು ಬುಡು... ಮೆಣಸಿನ ಕಾಯಿ ನೆಪ ಮಾಡ್ಕಂಡು ಅಲ್ಲೇ ಕೂತ್ಬುಡ್ಬೇಡ... ಎಲ್ಲ ಬೇಗ ಬೇಗ ಮಾಡಿ ಮಧ್ಯಾಹ್ನದ ಹೊತ್ತಿಗೆ ಜೈ ಅನ್ನಿಸಿ ಬಿಡೋಣ' ಎಂದು ಗೆಳೆಯರೆಲ್ಲಾ ತಾಕೀತು ಮಾಡಿದ್ದರು.

ಮಾಟಣ್ಣನಿಗೆ ಚಿಂತೆಗಿಟ್ಟುಕೊಂಡಿತ್ತು. ಕಾಡು ಹಬ್ಬ ಮಾಡಲು ಹೋದರೆ ಗಿಣಿ ಓಡಿಸುವವರು ಯಾರಪ್ಪ! ಇದೊಂದು ಕುಳ್ಳಿ ಇದೆ. ಅದು ನಾನು ಎಲ್ಲಿ ಹೋದರೆ ಅಲ್ಲಿಗೇ ಹಿಂಬಾಲಿಸಿ ಬರುತ್ತೆ... ನಾಳೆ ಒಂದು ಒಪ್ಪತ್ತು ಯಾರಾದರೂ ನೋಡಿಕೊಳ್ಳಿ ಎಂದು ಸೊಸೆಗೆ ಕೇಳಿಕೊಂಡರಾಯಿತು... ಒಂದು ಒಪ್ಪತ್ತು ಅಲ್ವಾ... ಬಿಡುವು ಮಾಡಿಕೊಡುತ್ತಾರೆ' ಎಂದು ಯೋಚಿಸುತ್ತಾ ಮನೆಗೆ ಬಂದ. ವಿಷಯ ಪ್ರಸ್ತಾಪಿಸಲು ಹೊಂಚು ಹಾಕುತ್ತಿದ್ದ. ಅಷ್ಟರಲ್ಲಿ ಸೊಸೆಯೇ ಇವನ ಬಳಿ ಬಂದು ಮಾತಿಗೆ ತೊಡಗಿದಳು.

'ಮಾವ ನಾಳೆ ಹೊರಟ್ಟೆ ಕೊಟ್ಟಿಗೆ ಹತ್ರ ಕೆಲ್ಸ ಐತೆ. ಮುಯ್ಯಾಳಿಗೆ ಹೇಳಿಕೊಂಡಿದೀವಿ. ಅಲ್ಲಿ ಮಧ್ಯಾಹ್ನದವರೆಗೂ ಕೆಲಸ ಆಗುತ್ತೆ. ಅಲ್ಲೇ ಊಟ ಮಾಡಿಕೊಂಡು ಸೀದಾ ಮೆಣಸಿನ ತೋಟಕ್ಕೆ ಬರ್ತೀವಿ... ಕಾಯಿ ಕೂಯ್ಯಕೆ ಪ್ಲಾಸ್ಟಿಕ್ ಬಕೆಟ್ ಎಲ್ಲಾ ಜೋಡಿಸಿ ಇಟ್ಟದೀವಿ. ಬೆಳಗ್ಗೆ ಹೋಗ್ತಾ ಹಂಗೇ ಹಿಡ್ಕಂಡು ಹೋಗಿರಿ' ಎಂದಳು. ಮಾಟಣ್ಣನಿಗೆ ತನ್ನ ಮಾತು ಹೇಳಿಕೊಳ್ಳಲು ಅವಕಾಶವೇ ಆಗಲಿಲ್ಲ.

ರಾತ್ರಿಯೆಲ್ಲಾ ನಿದ್ದೆಗೆಟ್ಟು ಯೋಚಿಸಿದ. ಅಪರೂಪಕ್ಕೆ ನಡೆಯುವ ಕಾಡು ಹಬ್ಬದ ಸಂಭ್ರಮ ಕಳೆದುಕೊಳ್ಳಲು ಮನಸ್ಸು ಒಪ್ಪಲಿಲ್ಲ... ಹ್ಯಾಗೂ ಗಿಣಿ ಓಡಿಸಿ ರೂಢಿ ಇದೆಯಲ್ಲ... 'ಕುಳ್ಳಿ'ಯನ್ನೇ ಒಂದೆರಡು ಗಂಟೆಯ ಮಟ್ಟಿಗೆ ಮೆಣಸಿನ ತೋಟದಲ್ಲಿ ಕಟ್ಟಿ ಹಾಕಿ ಹೋಗುವುದೆಂದು ನಿರ್ಧಾರ ಮಾಡಿಕೊಂಡಿದ್ದ.

ದಿನವೂ ಉಗುಬಗೆಯಿಂದ ಹಿಂಬಾಲಿಸುತ್ತಿದ್ದ 'ಕುಳ್ಳಿ' ಅಲ್ಲಲ್ಲೇ ಜಡತುಗೊಂಡು ನಿಲ್ಲುತ್ತಿತ್ತು. ಕೊರಳಿಗೆ ಚೈನ್ ಕಟ್ಟಿರುವುದರಿಂದ ಹೀಗಾಡುತ್ತಿದೆಯೇನೋ ಎಂದು ಹಿಂತಿರುಗಿ ನೋಡಿದ. ತುಸು ದೂರದಲ್ಲೇ ಒಂದೆರಡು ಊರ ನಾಯಿಗಳು ಹಿಂಬಾಲಿಸಿ ಬರುತ್ತಿದ್ದವು. ಬಕ್ಕೆಟಿನೊಳಗಿನ ರೊಟ್ಟಿಯ ವಾಸನೆ ಹೊಡೆದಿದೆಯೇನೋ. ಅದಕ್ಕೆ ಹಿಂಬಾಲಿಸುತ್ತಿವೆ ಎಂದುಕೊಳ್ಳುತ್ತಾ ಗದರಿಸಿದ. ಅವು ಅಲ್ಲಿಯೇ ತಡೆದು ನಿಂತವು. ಮತ್ತೆ ಮಾಟಣ್ಣ ನಡಿಗೆ ಆರಂಭಿಸಿದಂತೆ ಅವೂ ಹೆಜ್ಜೆ ಕೀಳತೊಡಗಿದವು.

'ಥೋ ಇವ್ರ ಔಸ್ ಹಾಳಾಗ' ಎನ್ನುತ್ತಾ ದಾರಿಯಲ್ಲಿ ಬಿದ್ದಿದ ಕಲ್ಲು ತೆಗೆದು ಅವುಗಳೆಡೆಗೆ ಬೀಸಿ ಒಗೆದ. ಅವು ಹಿಂದಕ್ಕೆ ನೆಗೆದು ಪಕ್ಕದ ಪೊದೆಯೊಳಗೆ ನುಸುಳಿಕೊಂಡವು.

ಮೆಣಸಿನ ತೋಟದ ಬಳಿ ಬಂದವನೇ ಮಾಟಣ್ಣ ತನ್ನ